

ಪರೀಕ್ಷೆಗಳಲ್ಲಿ ಅಂಕಗಳೇ ಮುಖ್ಯವಲ್ಲ ಎನ್ನುವುದು ನಿಜ. ಆದರೆ, ಅಂಕಗಳು ತೀರಾ ಅಮುಖ್ಯ ಎಂಬಂತೆ ನಿರ್ಲಕ್ಷ್ಯ ಮಾಡುವುದೂ ಸರಿಯಲ್ಲ.

# ಸೋತ ಕಥೆಗಳಿಗೆ ವೇದಿಕೆಗಳೇ ಇರುವುದಿಲ್ಲ

■ ಸ್ವಯಂಪ್ರಭಾ

ಮಕ್ಕಳ ಶಿಕ್ಷಣ ಹೇಗಿರಬೇಕು? ಅವರನ್ನು ಬೆಳೆಸುವುದು ಹೇಗೆ? ಇಂಥ ಪ್ರಶ್ನೆಗಳಿಗೆ ಉತ್ತರವಾಗಿ ದೊರೆಯುವ ಸಲಹೆ, ಮಾರ್ಗದರ್ಶನಗಳು ಸಾಮಾನ್ಯವಾಗಿ ಮಕ್ಕಳ ಪರವಾಗಿಯೇ ಇರುತ್ತವೆ. ಅಂದರೆ, ಮಕ್ಕಳನ್ನು ದಂಡಿಸಬಾರದು, ಮಕ್ಕಳ ಮನಸ್ಸನ್ನು ನೋಯಿಸಬಾರದು ಎಂಬರ್ಥದಲ್ಲಿಯೇ ಸಲಹೆ–ಮಾರ್ಗದರ್ಶನಗಳು ಇರುತ್ತವೆ. ಎಳೆಯರ ಮನಸ್ಸು ಹಸಿ ಮಣ್ಣಿದ್ದಂತೆ, ನಮಗೆ ಬೇಕಾದಂತೆ ಅದನ್ನು ರೂಪಿಸಬಹುದು ಎಂಬುದೊಂದು ರೂಢಿಯ ಮಾತು. ಅದು ನಿಜ ಕೂಡ. ಆದರೆ, ಆ ಮಾತಿನ ಮರೆಯಲ್ಲಿಯೇ ಆತಂಕವೊಂದು ಇದ್ದೇ ಇದೆಯಲ್ಲ, ಆ ಬಗ್ಗೆ ಹೆಚ್ಚಿನ ಚರ್ಚೆಗಳು ನಡೆಯುವುದಿಲ್ಲ.

ಎಲ್ಲ ಮಕ್ಕಳೂ ಚುರುಕುಮತಿಯವರೂ, ಏಕಪಾಠಿಗಳೋ, ಚೆನ್ನಾಗಿ ಓದುವ ಬುದ್ಧಿವಂತರೋ ಆಗಿರುವುದಿಲ್ಲ. ಒಬ್ಬೊಬ್ಬರ ಗ್ರಹಿಕೆಯ ಸಾಮರ್ಥ್ಯ ಒಂದೊಂದು ರೀತಿ ಇರುತ್ತದೆ. ಒಂದೇ ಮಾತಿಗೆ ವಿಷಯವನ್ನು ಅರ್ಥ ಮಾಡಿಕೊಳ್ಳುವವರು ಕೆಲವರಾದರೆ, ಹತ್ತಾರು ಬಾರಿ ಹೇಳಿದ ಬಳಿಕ ವಿಷಯ ಗ್ರಹಿಸುವವರು ಕೆಲವರು. ಮತ್ತೆ ಕೆಲವರಿಗೆ ಹತ್ತಾರು ಬಾರಿ ಹೇಳಿದರೂ ವಿಷಯ ಮನಸ್ಸಿನಲ್ಲಿ ಉಳಿಯುವುದಿಲ್ಲ. ಅಂತಹ ಸಂದರ್ಭದಲ್ಲಿ ಮಕ್ಕಳು ಶ್ರಮ ಹಾಕಿ ಕಲಿಯಬೇಕಾಗುತ್ತದೆ. ಆದರೆ ಶ್ರಮ ಹಾಕುವಂತೆ ಮಕ್ಕಳ ಮೇಲೆ ನಯವಾದ ಒತ್ತಡವನ್ನು ಹೇಗೆ ಹಾಕಬೇಕು ಎಂಬುದು ಕಲಿಸುವವರ ಮನಸ್ಥಿತಿ, ತರಬೇತಿಯನ್ನು ಅವಲಂಬಿಸಿರುತ್ತದೆ.

ಕಲಿಕೆ ಎಂದ ಕೂಡಲೇ ಶಾಲೆಯಲ್ಲಿ ಪಾಠ ಪಠ್ಯಗಳ ಕಲಿಕೆ ಎಂದೇ ಭಾವಿಸಬೇಕಿಲ್ಲ. ಈಜು ಕಲಿಯುತ್ತೇನೆ ಎಂದು ಹುಮ್ಮಸ್ಸಿನಿಂದ ಹೊರಡುವ ಹುಡುಗಿ ಆಡಾಡುತ್ತಾ ಈಜು ಅಭ್ಯಾಸಮಾಡುತ್ತಾಳೆ. ಆದರೆ ಈಜು ಅಭ್ಯಾಸವಾದ ಬಳಿಕ ಟ್ರ್ಯಾಕ್‌ಗೆ ಬಂದ ಕೂಡಲೇ ಕಲಿಕೆಯಲ್ಲಿ ಕಳ್ಳತನ ತೋರುತ್ತಾಳೆ. ಆಗ ಕೋಚ್ ಕಠಿಣವಾದ ನಿಲುವು ತಳೆದು ಅವರನ್ನು ತರಬೇತುಗೊಳಿಸುತ್ತಾರೆ. ಮುಂಜಾನೆ ಐದು ಗಂಟೆಗೆ ಹಾಲುತರುವುದಕ್ಕೆಂದು ಹೊರಟರೆ ರಸ್ತೆಯಲ್ಲಿಯೇ ಮಕ್ಕಳಿಗೆ ಓಟದ ಪಾಠ ಮಾಡುವ ಕೋಚ್ ಕಾಣಿಸುತ್ತಾರೆ. ನಗುನಗುತ್ತ ಭರತನಾಟ್ಯ ಪಾಠ ಹೇಳುವ ಟೀಚರ್, ಕೋಲನ್ನು ಡೆಸ್ಕಿಗೆ ಬಡಿಯುತ್ತ ತಾಳ ಹಾಕುತ್ತ ಒಂದೊಂದೇ ತರಗತಿಯಲ್ಲಿ ನೃತ್ಯ ಗತಿಯನ್ನು ವೇಗಗೊಳಿಸುತ್ತಾ ಹೋಗುತ್ತಾರೆ. ಮಕ್ಕಳು ದಣಿಯುತ್ತ ದಣಿಯುತ್ತ ಕುಣಿಯುತ್ತ ಹೆಜ್ಜೆಗಾರಿಕೆಗೆ ಪಳಗುತ್ತಾರೆ. ಆದರೆ ಇವೆಲ್ಲವೂ ಶಾಲೆಯ ಕಲಿಕೆಯಂತೆ ಅಂಕಗಳ ಬೆಂಬತ್ತಿ ನಡೆಯುವ ತರಬೇತಿಗಳಲ್ಲ. ಸ್ವಲ್ಪ ನಿಧಾನಗತಿಯಾದರೂ ಪರವಾಗಿಲ್ಲ, ಹುಡುಗ ಕಲಿಯುತ್ತಾನೆ ಎಂಬ ರಿಯಾಯಿತಿ ಇದ್ದೇ ಇದೆ. ಆದರೆ ಶಾಲೆಯಲ್ಲಿನ ಕಲಿಕೆ ಅಂಕಗಳ ಬೆಂಬತ್ತುವ ಧಾವಂತದಲ್ಲಿ ಇರುತ್ತದೆ.

ಆರನೇ ತರಗತಿಯಲ್ಲಿ 'ರಿಷಭ್'ನನ್ನು ಸಂಭಾಳಿಸುವುದು ಬಹಳ ಕಷ್ಟವಾಗಿತ್ತು. ಅತ್ತ ಟೀಚರ್ರೂಗ್ಗಿ ಕಷ್ಟ. ಇತ್ತ ಅಮ್ಮನಿಗೂ ಕಷ್ಟ. ಹುಡುಗ ಹೋಮ್‌ವರ್ಕ್ ಮಾಡುವುದಕ್ಕೇ ಸಿದ್ಧನಿಲ್ಲ. ಕ್ಲಾಸಿನಿಂದ ಹೊರಗೆ ಹೋಗು ಎಂದ ತಕ್ಷಣವೇ ಎದ್ದು ನಡೆದು ಬಿಡುತ್ತಿದ್ದ. ಉಡಾಫೆಯ ಹುಡುಗ ಎಂದೇ ಹಣೆಪಟ್ಟಿ ಹಚ್ಚಿದ್ದರು ಅವನಿಗೆ. ಹೊಸ ಟೀಚರ್ ಬಂದಾಗ, 'ಹೋಗಿ ಮೇಡಂ, ನಾನು ಈ ಶಾಲೆಯಲ್ಲಿ ಆರು ವರ್ಷದಿಂದ ಇದ್ದೇನೆ. ನೀವೋ ಈ ಶಾಲೆಗೆ ಹೊಸಬರು' ಎಂದು ಹೇಳಿಬಿಟ್ಟಿದ್ದ. ಇಂತಹ ಸಂದರ್ಭಗಳಲ್ಲಿ ಮಕ್ಕಳನ್ನು ತಿದ್ದಲು ಪ್ರೀತಿಯ ಜೊತೆಗೆ ಸಣ್ಣ ಪ್ರಮಾಣದ ಶಿಕ್ಷೆಯ ಅಗತ್ಯವೂ ಇರುತ್ತದೆ. 'ಅಗತ್ಯವಿದ್ದರೆ ಮಗನಿಗೆ ಹೊಡೆಯಿರಿ ಮೇಡಂ, ನಾನೇನೂ ಕಂಪ್ಲೇಂಟ್ ಮಾಡುವುದಿಲ್ಲ' ಎಂದು ಹೇಳುವ ಎಷ್ಟೋ ಪಾಲಕರು ಶಾಲೆಯ ಕಾರಿಡಾರ್‌ಗಳಲ್ಲಿ ನಿಂತಿರುತ್ತಾರೆ.

ಜೀವನದಲ್ಲಿ ಅಂಕಗಳಷ್ಟೇ ಮುಖ್ಯವಲ್ಲ ಎಂದು ಘೋಷಿಸುವ ಅನೇಕ ಭಾಷಣಗಳು ಬರಹಗಳನ್ನು ನಾವು ಓದುತ್ತೇವೆ. ಹತ್ತನೇ ಕ್ಲಾಸಿನಲ್ಲಿ ಫೇಲಾದರೂ, ಕ್ರಿಕೆಟ್ ಪ್ಲೇಯರ್ ಆಗಿ ಗುರುತಿಸಿಕೊಂಡ ಸಚಿನ್ ತೆಂಡೂಲ್ಕರ್ ಉದಾಹರಣೆ ಕೊಡುತ್ತೇವೆ. ಆದರೆ ಶಾಲೆಯಲ್ಲಿ ಫೇಲ್ ಆಗಿ, ಇನ್ನೊಂದು ಕ್ಷೇತ್ರವನ್ನು ಆಯ್ದುಕೊಂಡು ಯಶಸ್ಸು ಕಂಡವರಿಗಷ್ಟೇ ವೇದಿಕೆಗಳು ದೊರೆಯುತ್ತವೆ. ಅಂತಹ ವೇದಿಕೆಗಳಲ್ಲಿ ಅವರು, ತಾವು ಚಿಕ್ಕಂದಿನಲ್ಲಿ ಓದುವುದನ್ನು, ಪರೀಕ್ಷೆ ಬರೆಯುವುದನ್ನು ತಪ್ಪಿಸಲು ಮಾಡಿದ ಕರಾಮತ್ತು ಹೇಳುತ್ತಾರೆ. ಅದನ್ನು ಕೇಳುತ್ತ, ನಕ್ಕುಬಿಡುತ್ತೇವೆ. ಇನ್ನೊಂದು ಕ್ಷೇತ್ರದಲ್ಲಿ ಅವರು ಅಚಾನಕ್ ಆಗಿ ಮಿಂಚುವುದು ಸಾಧ್ಯವಾಗದೇ ಇದ್ದಿದ್ದರೆ ಅವರು ಎಲ್ಲಿರುತ್ತಿದ್ದರು? ಸೋತ ಕಥೆಗಳಿಗೆ ವೇದಿಕೆಗಳೇ ಇರುವುದಿಲ್ಲ.

ಕಥೆ ಕಾವ್ಯಗಳಾಗಲೀ, ಮಾಧ್ಯಮಗಳಾಗಲೀ, ವೇದಿಕೆಗಳಾಗಲೀ ಸೋಲಿನ ಭಯವನ್ನು ಹುಟ್ಟಿಸುವುದಿಲ್ಲ. ಹುಟ್ಟಿಸಲೂಬಾರದು. ಹಾಗಂತ ಈ ಸಮಾಜದಲ್ಲಿ ಸೋಲು ಇಲ್ಲವೆಂದೇನಲ್ಲ. ಸದ್ಯಕ್ಕೆ ಸೋತರೂ ಪರವಾಗಿಲ್ಲ ಮಗು, ಇದೇ ದಾರಿಯಲ್ಲಿ ಮತ್ತೆ ಮತ್ತೆ ಶ್ರಮ ಹಾಕಿ ಸಾಗಿದರೆ, ನಿನಗೆ ಗೆಲುವು ಸಿಕ್ಕೇ ಸಿಗುವುದು ಎಂದು ತಿಳಿ ಹೇಳುವ ವಿಧಾನಗಳನ್ನು ಶಿಕ್ಷಕರು ಮತ್ತು ಪೋಷಕರು ತಿಳಿಯಬೇಕು. ಪರೀಕ್ಷೆಗಳಲ್ಲಿ ಅಂಕಗಳೇ ಮುಖ್ಯವಲ್ಲ ಎನ್ನುವುದು ನಿಜ. ಆದರೆ, ಅಂಕಗಳು ತೀರಾ ಅಮುಖ್ಯ ಎಂಬಂತೆ ನಿರ್ಲಕ್ಷ್ಯ ಮಾಡುವುದೂ ಸರಿಯಲ್ಲ ಎನ್ನುವ ಅರಿವನ್ನು ಮಕ್ಕಳಲ್ಲಿ ಹುಟ್ಟಿಸುವುದು ಕಲಿಕೆಯ ಸರಿಯಾದ ವಿಧಾನ. ಪೇರೆಂಟಿಂಗ್ ತರಗತಿಗಳು, ಶಿಕ್ಷಕರಿಗೆ ದೊರೆಯುವ ಓರಿಯೆಂಟೇಷನ್ ತರಬೇತಿಗಳು ಇಂತಹ ಸೂಕ್ಷ್ಮತೆಯತ್ತ ಗಮನ ಹರಿಸಬೇಕು. ■